# ಅವರ ಬದುಕಿನೊಂದು ಪುಟ

■ ಸ. ರಘುನಾಥ
ಕಲೆ: ಈಶ್ವರ ಬಡಿಗೇರ



ರಾತ್ರಿ ಹತ್ತು ದಾಟಿ ಹನ್ನೊಂದಕ್ಕೆ ಕೊಂಚ ಮುಂಚೆ, ಮಕ್ಕಳು ಮಲಗಿದ್ದರು. ದಂಪತಿ ತಲೆಬಾಗಿಲನ್ನು ಮುಂದಕ್ಕೆಳೆದು ಬಂದು ಜಗುಲಿಯ ಮೇಲೆ ಕುಳಿತರು. ಚಂದ್ರ ದೊಡ್ಡ ಕರಿಮೋಡಕ್ಕೆ ಬಂಧಿಯಾಗಿದ್ದ. ಅದನ್ನು ಕೂಡಲೇ ಸರಿಸುವಷ್ಟು ಬಲವಾದ ಗಾಳಿ ಬೀಸುತ್ತಿರಲಿಲ್ಲ. ಆದರೆ ಮುಗಿಲಾಚೆಗೆ ನುಸುಳಿ ತೆಳು ಬೆಳದಿಂಗಳು ಭೂಮಿಗೆ ಬರುತ್ತಿತ್ತು. ಅವರನ್ನು ಹೊದೆದಿದ್ದ ಆ ಬೆಳದಿಂಗಳಿಗಷ್ಟೇ ಕೇಳಿಸುವಂತೆ ಮಡದಿ ಗಂಡನ ಕಿವಿಯಲ್ಲಿ ಏನೋ ಪಿಸುಗುಟ್ಟಿದಳು. ಅವನು ಅವಳ ಕೆನ್ನೆಗೆ ಮುತ್ತುಕೊಟ್ಟ. ಅವಳು ಅವನ ನೆತ್ತಿಗೆ ಮೆಲುವಾಗಿ ಮೊಟಕಿದಳು. ದೀಪಾವಳಿಗೆ ಇನ್ನೊಂದು ವಾರವಿದೆ. ಅಳಿಯ ಮಗಳನ್ನು ಕರೆತಂದು ಹಬ್ಬ ಮಾಡಬೇಕು ಅಂದಳು. ಇನ್ನೂ ವಾರವಿದೆ, ಆ ವೇಳೆಗೆ ಕೋಸಿನ ತೋಟ ಮಾರಾಟವಾದರೆ ನೋಡೋಣ ಅಂದ. ಬೆಳೆ ಚೆನ್ನಾಗಿದೆ ಆಗುತ್ತೆ ಅಂದಳು. ಹಾಗೆ ಆದರೆ ನೋಡೋಣವೆಂದ. ನೋಡೋಣ ಅನ್ನೊ ಮಾತು ಬೇಡ, ಮಾಡುವುದೇ ಅಂದಳು. ಇಬ್ಬರೂ ಎದ್ದು ಒಳಗೆ ಹೋದರು.

ರಾತ್ರಿ ಎಂಟು ದಾಟಿ ಒಂಬತ್ತಕ್ಕೆ ಕೊಂಚ ಮುಂಚೆ,

ಮಕ್ಕಳು ಓದಿಕೊಳ್ಳುತ್ತಿದ್ದರು. ದಂಪತಿ ತಲೆಬಾಗಿಲನ್ನು ಮುಂದಕ್ಕೆಳೆದು ಬಂದು ಜಗುಲಿಯ ಮೇಲೆ ಕುಳಿತರು. ಚಂದ್ರ ತಿಳಿಮುಗಿಲ ನಡುವೆ ವಿಹರಿಸುತ್ತಿದ್ದ. ದಂಪತಿ ಚಿಂತೆಯಲ್ಲಿದ್ದರು. ಈ ಎರಡು ದಿನದಲ್ಲಿ ತೋಟದ ಮೇಲೆ ಕೋಸು ಕೊಳ್ಳಲು ಬರುವೆವೆಂದವರು ಬಂದಿರಲಿಲ್ಲ. ಹೋಗಿ ಕೇಳಿದಾಗ, ಟನ್ನು ಎಂಟುನೂರಕ್ಕೆ ಹೋಗುತ್ತಿದೆ. ಮುಂದಿನ ವಾರದಲ್ಲಿ ಏರೀತು. ನೋಡೋಣವೆಂದಿದ್ದರು. ಕೊಂಚ ಮುಂಗಡ ಹಣ ಕೊಡಿ ಅಂದರೆ, ಈ ಬೆಲೆ ಇಟ್ಟುಕೊಂಡು ಮುಂಗಡವೆ? ಅಸಾಧ್ಯವೆಂದಿದ್ದರು. ನಾಳೆ ಯಾರನ್ನಾದರೂ ಹುಡುಕಬೇಕು ಅಂದ. ಬರುತ್ತಾರ... ಬೆಲೆ ಏರುತ್ತ... ಅಂದಳು. ನೋಡಬೇಕೆಂದ. ಇಬ್ಬರೂ ಎದ್ದು ಒಳಗೆ ಹೋದರು.

ರಾತ್ರಿ ಹನ್ನೊಂದು ದಾಟಿ ಹನ್ನೆರಡಕ್ಕೆ ಕೊಂಚ ಮುಂಚೆ,

ಮಕ್ಕಳು ಮಲಗಿದ್ದರು. ದಂಪತಿ ತಲೆಬಾಗಿಲನ್ನು ಮುಂದಕ್ಕೆಳೆದು ಬಂದು ಜಗುಲಿಯ ಮೇಲೆ ಕುಳಿತರು. ಚಂದ್ರ ಗಗನವನ್ನು ಮರೆತವನಂತೆ ಬಂದಿರಲಿಲ್ಲ. ಮಿನುಗುವ ಚುಕ್ಕಿಗಳಷ್ಟೇ ಬಾನಿನಲ್ಲಿ. ಹಬ್ಬ ಬಂತು, ಹೋಯಿತು. ಕೋಸು ತೋಟದಲ್ಲೇ ಕೊಳೆಯಿತು. ಹಬ್ಬದ ದಿನ ಮಕ್ಕಳಿಗೆ ಹಬ್ಬದೂಟ: ಹೊಟ್ಟೆತುಂಬ ಮುದ್ದೆ, ಬಾಯಿತುಂಬ ಅನ್ನ.

ಮುಂದೇನು? ಮಡದಿ ಕೇಳಿದಳು. ನೀನೇ ಹೇಳಬೇಕೆಂದ ಗಂಡ. ಹಸು ಗಬ್ಬಗಟ್ಟಿದೆ. ಮಾರಿಬಿಡೋಣ. ಬೆಳೆ ಇಡಲು ದುಡ್ಡು ಬೇಕಲ್ಲ ಅಂದಳು. ಮನೆಮಗಳಿದ್ದ ಹಾಗಿದೆ, ಮಾರೋದಾ? ಅಂದ. ಬೇರೆ ಏನಿದೆ ಅನ್ನುತ್ತಲೇ ಕೊರಳಲ್ಲಿದ್ದ ಒಂದೆಳೆ ಚಿನ್ನದ ಸರವನ್ನು ಗಂಡನಿಗೆ ತೋರಿಸಿದಳು. ಜಗುಲಿಯಡಿ ಮಲಗಿದ್ದ ಹುಂಜ ಎದ್ದು ರೆಕ್ಕೆ ಬಡಿದು ಕೂಗಿತು. ಇಬ್ಬರೂ ಎದ್ದು ಒಳಗೆ ಹೋದರು. ■